ESI.A.No.22/2020

AW-1,

ದಿನಾಂಕಃ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ನನ್ನ ಸಂಸ್ಥೆ 2010 ರಲ್ಲಿ ಸ್ಥಾಪನೆ ಆಗಿರುತ್ತದೆ ಎಂದರೆ ಸರಿ . ನಂತರ ನಾನು ನನ್ನ ಸಂಸ್ಥೆಗೆ ಸ್ವತಃ ಇ ಎಸ್ ಐ ಕೋಡನ್ನು ಪಡೆಪಿದುಕೊಂಡಿರುತ್ತೇನೆ ಎಂದರೆ ಸರಿ . ಆ ಕಾಲಕ್ಕೆ ಫಾರಂ 1 ರಲ್ಲಿ ನನ್ನ ಸಂಸ್ಥೆಯಡಿ 20 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ . ಮೇ 2011 ರಿಂದ ಡಿಸೆಂಬರ್ 2011 ರವರೆ ಮತ್ತು ಅಕ್ಟೋಬರ್ 2014 ರಿಂದ ಡಿಸೆಂಬರ್ 2015 ರವರೆಗೆ ನಾನು ಯಾವುದೇ ವಂತಿಗೆಯನ್ನು ಕಟ್ಟಿರುವುದಿಲ್ಲ ಎಂಬ ಸೂಚನೆಗೆ ಸಾಕ್ಷಿಯು ಅಡ್ವಾನ್ಸ ಪೇಮೆಂಟ್ ಮಾಡಿರುವುದರಿಂದ ವಂತಿಗೆಯನ್ನು ಕಟ್ಟುವ ಅವಶ್ಯಕತೆ ಇರುವುದಿಲ್ಲ ಎಂದು ಇ ಎಸ್ ಐ ಅಧಿಕಾರಿಗಳು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈ ಟ್ರಿಬ್ಯುನಲ್ ಮುಂದೆ ಸಲ್ಲಿಸಿದ ಅರ್ಜಿಯಲ್ಲಿ ಸದರಿ ವಿಚಾರವನ್ನು ನಾನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಿ-18 ನೋಟೀಸ್ ನನಗೆ 18-2-2016 ರಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ನೋಟೀಸಿನಲ್ಲಿ ನಾನು ರೂ.1,71,600-00 ಗಳ ವಂತಿಗೆಯನ್ನು ಪಾವತಿಸಬೇಕಾಗಿರುತ್ತದೆ ಹಾಗೂ ಖುದ್ದು ಸುನಾವಣೆಗೆ 17-3-2016 ರಂದು ಹಾಜರಾಗಬೇಕು ಎಂದು ನಮೂದಿಸಲಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನೋಟೀಸನ್ನು ನನ್ನ ವಾಸದ ವಿಳಾಸಕ್ಕೆ ಕಳುಹಿಸಿದಾಗ ಅದನ್ನು ರೆಫ್ಯೂಸ್ ಮಾಡಲಾಗಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ನಾನು ಮಾಡಿರುವುದಿಲ್ಲ ಆ ಕಾಲಕ್ಕೆ ನಾನು ಮನೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನಂತರ ಸೆಕ್ಷನ್ 45 ಎ ರಡಿಯಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇ ಎಸ್ ಐ ಕೋಡನ್ನು ಪಡೆದುಕೊಂಡಾಗ ನನ್ನ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರ್ಮಿಕರು ಕಡಿಮೆಯಾದ ಪಕ್ಷದಲ್ಲಿ ಅಥವಾ ಸಂಸ್ಥೆಯನ್ನು ಮುಚ್ಚಿದ್ದ ಪಕ್ಷದಲ್ಲಿ ಆ ಬಗ್ಗೆ ಮಾಹಿತಿಯನ್ನು ಇ ಎಸ್ ಐ ಕಾರ್ಪೋರೇಶನ್ನಿಗೆ ನೀಡಬೇಕಾಗುತ್ತದೆ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಈ ಟ್ರಿಬ್ಯುನಲ್ ಮುಂದೆ ಅಟೆಂಡೆನ್ಸ ರಿಜಿಸ್ಟರ್, ಬುಕ್ ಆಫ್ ಅಕೌಂಟ್ಸ, ಕ್ಯಾಷ್ ಬುಕ್. ಬಿಲ್ಲು , ವೇಜ್ ರಿಜಿಸ್ಟರ್ ಮತ್ತು ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ಸ ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ನಿಶಾನೆ ಎ-1 ಆದೇಶದ ಮೇಲೆ ಸೆಕ್ಷನ್ 45 ಎಎ ರಡಿಯಲ್ಲಿ ಯಾವುದೇ ಮೇಲ್ ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ . ನಿಶಾನೆ ಎ-1 ಆದೇಶದ ನಂತರ ನೀವು ಸಂಸ್ಥೆಯು ಮುಚ್ಚಿಹೋಗಿರುವುದರ ಬಗ್ಗೆ ಯಾವುದೇ ದಾಖಲಾತಿಯನ್ನು ಇ ಎಸ್ ಐ ಕಾರ್ಪೋರೇಶನ್ನಿಗೆ ನೀಡಿರುವುದಿಲ್ಲ ಎಂಬ ಸೂಚನೆಗೆ ಸಾಕ್ಷಿಯು ಅಲ್ಲಿ ನೀಡಲು ಬರುವುದಿಲ್ಲ ಎಂದು ಹೇಳಿದ ಮೇರೆಗೆ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಿಶಾನೆ ಎ-2 ಪತ್ರವನ್ನು ಕಾರ್ಮಿಕ ಇಲಾಖೆಗೆ ನೀಡಿದಂದತೆ ಇ

ESI.A.No.22/2020

AW-1,

ಎಸ್ ಐ ಕಾರ್ಪೋರೇಶನ್ನಿಗೆ ನೀಡಲು ಯಾವುದೇ ತೊಂದರೆ ಇರಲಿಲ್ಲ ಎಂಬ ಸೂಚನಗೆ ಸಾಕ್ಷಿಯು ಕಾರ್ಮಿಕ ಇಲಾಖೆಗೆ ಸಂಸ್ಥೆ ಮುಚ್ಚಿಹೋಗಿದರ ಬಗ್ಗೆ ಮಾಹಿತಿಯನ್ನು ನೀಡಿದರೆ ಸಾಕಾಗುತ್ತದೆ ಎಂದು ತಿಳಿದು ನೀಡಿರುವುದಿಲ್ಲ ಎನ್ನುತ್ತಾರೆ. ಸಂಸ್ಥೆ ಸ್ಥಾಪಿಸಬೇಕಾದರೆ ನಾನು ಕಾರ್ಪೋರೇಶನ್ನಿಂದ ಟ್ರೇಡ್ ಲೈಸನ್ಸನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಕಾರ್ಪೋರೇಶನ್ನಿಗೆ ಸಂಸ್ಥೆ ಮುಚ್ಚಿದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ನಿಶಾನೆ ಎ-6 ಮತ್ತು 7 ಕರಾರು ಪತ್ರ ಹಾಗೂ ಕರಾರು ರದ್ದು ಪತ್ರಗಳನ್ನು ನಾನು ಈ ಪ್ರಕರಣಕ್ಕೆ ಅನುಗುಣವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಎ-6 ಕರಾರು ಪತ್ರದಲ್ಲಿ ಮೃತ ವ್ಯಕ್ತಿಯೊಂದಿಗೆ ಕರಾರು ಪತ್ರ ಮಾಡಲಾಗಿರುತ್ತದೆ ಆದುದರಿಂದ ಸೃಷ್ಟಿ ಕರಾರು ಪತ್ರ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಣ್ ತಪ್ಪಿನಿಂದ ನಿಶಾನೆ ಎ-6 ರಲ್ಲಿ ರಾಮಲಿಂಗೇಗೌಡರ ಹೆಸರಿನ ಮುಂದೆ ಲೇಟ್ ಎಂದು ಟೈಪ್ ಆಗಿರುತ್ತದೆ ಆದರೆ ಅವರು ಈಗಲೂ ಕೂಡ ಬದುಕಿರುತ್ತಾರೆ ಎಂದು ನುಡಿಯುತ್ತಾರೆ. ನಿಶಾನೆ ಎ-7 ರಲ್ಲಿ ರಾಮಲಿಂಗೇಗೌಡರ ಸಹಿ ಇರುವುದಿಲ್ಲ ಅವರ ಮಗನ ಸಹಿ ಇರುತ್ತದೆ ಎಂದರೆ ಸರಿ. ನನ್ನ ಸಂಸ್ಥೆಯು ಈಗಲೂ ಕೂಡ ನಡೆಯುತ್ತಿದ್ದು ಅದರಲ್ಲಿ 20 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2010 ರಲ್ಲಿ ನಾನು ವಾಣಿಜ್ಯ ತೆರಿಗೆ ಇಲಾಖೆಯಿಂದ ಲೈಸನ್ಸನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಇಲಾಖೆಯಿಂದ ನಾನು ಕ್ಲೋಷರ್ ಸರ್ಟಿಫಿಕೇಟನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಇ ಎಸ್ ಐ ಕೋಡ್ ಪಡೆದುಕೊಂಡ ಕಾಲಕ್ಕೆ 20 ಜನ ಕಾರ್ಮಿಕರ ಸಹಿ ಇರುವ ವೇಜ್ ರಿಜಿಸ್ಟರನ್ನು ಇ ಎಸ್ ಐ ಕಾರ್ಪೋರೇಶನ್ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ವೇಜ್ ರಿಜಿಸ್ಟರ್ ಮತ್ತು ಅಟೆಂಡೆನ್ಸ ರಿಜಿಸ್ಟರನ್ನು ಈ ಟ್ರಿಬ್ಯುಲನಲ್ ಮುಂದೆ ಹಾಜರುಪಡಿಸದೇ ಇರುವುದರಿಂದ ಇ ಎಸ್ ಐ ಕಾರ್ಪೋರೇಶನ್ನವರು ಲೆಕ್ಕ ಮಾಡಿದ ವಂತಿಗೆ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ವಂತಿಗೆ ನೀಡುವುದನ್ನು ತಪ್ಪಿಸಲು ಈ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್.ಪಿ.),

ಅಧ್ಯಕ್ಷಾಧಿಕಾರಿಗಳು/ಜಡ್ಜ್

ಇ.ಎಸ್.ಐ.ನ್ಯಾಯಾಲಯ, ಮೈಸೂರು.